# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/9445/2017/ಪಿಪಿ ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 19/08/2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ. ವೀರಶೇಖರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇಲೂರು ಗ್ರಾಮ ಪಂಚಾಯತಿ, ಕುಂದಾಪುರ ತಾಲ್ಲೂಕು ಉಡುಪಿ ಜಿಲ್ಲೆ ಮತ್ತು (2) ಶ್ರೀ.ಹೆಚ್.ಕೆ. ತಿಪ್ಪೇಸ್ವಾಮಿ, ತಹಶೀಲ್ದಾರ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ಶ್ರೀ ಮಧುಕರ್ ಶೆಟ್ಟಿ ತಂದೆ ಲೇಟ್ ಕೃಷ್ಣಪ್ಪ ಶೆಟ್ಟಿ, ಬೇಲೂರು ಗ್ರಾಮ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಈ ದೂರನ್ನು (1) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇಲೂರು ಗ್ರಾಮ ಪಂಚಾಯತಿ, ಕುಂದಾಪುರ ತಾಲ್ಲೂಕು ಉಡುಪಿ ಜಿಲ್ಲೆ, (2) ರಾಜಸ್ವ ನಿರೀಕ್ಷಕರು, ಕುಂದಾಪುರ ಹೋಬಳಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಮತ್ತು (3) ತಹಶೀಲ್ದಾರ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ '1 ರಿಂದ 3ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ.

2. ದೂರಿನ ಸಂಕ್ಷಿಪ್ತ ಸಾರಾಂಶ:

(ಅ) ಕುಂದಾಪುರ ತಾಲ್ಲೂಕು ಬೇಳೂರು ಗ್ರಾಮದ ಸರ್ವೆ ನಂ. 270/17 (0.16 ಸೆಂಟ್ಸ್) ರಾಧಾ ಮರಕಾಲ್ತಿ ಕೋಂ ರಾಮ ಮರಕಾಲ ಇವರಿಗೆ ಎನ್.ಸಿ.ಆರ್.

ಡಿ.ಆರ್ 680.97-98 ದರಖಾಸ್ತು ಅಕ್ರಮ ಸಕ್ರಮದಡಿ ಮಂಜೂರಾಗಿರುತ್ತದೆ. ಇವರ ಸ್ಥಳವು ಹುಣ್ಸೆಮಕ್ಕಿ-ಬೇಳೂರು ಪಿ.ಡಬ್ಲ್ಯೂ.ಡಿ. ರಸ್ತೆ ಮಾರ್ಜಿನ್‌ಗೆ ಹೊಂದಿಕೊಂಡಿರುತ್ತದೆ. ಇದು ಮುಖ್ಯ ಜಿಲ್ಲಾ ರಸ್ತೆಯಾಗಿದ್ದು ರಸ್ತೆಯ ಮಧ್ಯೆ ಭಾಗದಿಂದ 25 ಮೀಟರ್ ಅಂತರವನ್ನು ಬಿಟ್ಟು ಕಟ್ಟಡ ಅಥವಾ ಮನೆ ಕಟ್ಟುವಂತೆ ಈ ಹಿಂದೆಯೇ ಆದೇಶ ಆಗಿರುತ್ತದೆ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ನಂ. 2 ಉಪ ವಿಭಾಗ, ಕುಂದಾಪುರ ಇವರು ಬೇಳೂರು ಗ್ರಾಮ ಪಂಚಾಯತ್‌ಗೆ ತಿಳುವಳಿಕೆ ಪತ್ರ ಕಳುಹಿಸಿದ್ದು, ಗ್ರಾಮ ಪಂಚಾಯತ್ ವ್ಯಾಪ್ತಿಯ ಬೇಳೂರು ಹುಣ್ಸೆಮಕ್ಕಿ ಪಿ.ಡಬ್ಲ್ಯೂ.ಡಿ. ರಸ್ತೆ ಮಾರ್ಜಿನ್‌ನಲ್ಲಿ ಬೇಳೂರು ಪಂಚಾಯತ್‌ನವರು ಪಂಚಾಯತ್ ಹತ್ತಿರ ಅಂಗಡಿ ಕೋಣೆ ರಚನೆ ಮಾಡುತ್ತಿರುವಾಗ ರಸ್ತೆ ಮಾರ್ಜಿನ್ ಹತ್ತಿರದಲ್ಲೇ ಕಟ್ಟಡ ಕಟ್ಟುತ್ತಿರುವ ಬಗ್ಗೆ ಸಾರ್ವಜನಿಕರು ದಿನಾಂಕ: 19/12/2013 ರಂದು ಕುಂದಾಪುರ ಪಿ.ಡಬ್ಲ್ಯೂ.ಡಿ. ಇಲಾಖೆಗೆ ದೂರು ನೀಡಿದ್ದು, ದೂರಿನಂತೆ ಕುಂದಾಪುರ ಕಾರ್ಯನಿರ್ವಾಹಕ ಸಹಾಯಕ ಇಂಜಿನಿಯರ್ ರವರು ಸ್ಥಳ ಪರಿಶೀಲಿಸಿ, ರಸ್ತೆ ಮಾರ್ಜಿನ್‌ನಲ್ಲಿ 25 ಮೀಟರ್ ಬಿಟ್ಟು ಕಟ್ಟಡ ಕಟ್ಟುವಂತೆ ಸೂಚಿಸಿ, ಕಟ್ಟಿದ ಕಟ್ಟಡಕ್ಕೆ ಆಕ್ಷೇಪಣೆ ನೀಡಿ, ಬೇಳೂರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಗೆ ನೋಟಿಸ್ ಜಾರಿ ಮಾಡಿ ಕಾಮಗಾರಿ ನಿಲ್ಲಿಸಿರುತ್ತಾರೆ.

(ಆ) ರಾಧಾ ಮರಕಾಲ್ತಿಯವರು ಸರ್ವೆ ನಂ. 270/7 (0.16 ಸೆಂಟ್ಸ್) ನಲ್ಲಿ ಹುಣ್ಸೆಮಕ್ಕಿ ಬೇಳೂರು ವ್ಯಾಪ್ತಿಯ ರಸ್ತೆ ಮಾರ್ಜಿನ್‌ನಲ್ಲಿ ಕಟ್ಟಡ ಕಟ್ಟುತ್ತಿರುವ ಬಗ್ಗೆ ದಿನಾಂಕ: 17/12/2015 ರಂದು ಕುಂದಾಪುರ ಪಿ.ಡಬ್ಲ್ಯೂ.ಡಿ. ಇಲಾಖೆಗೆ ದೂರು ನೀಡಿದ್ದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಮೊಗೆಬೆಟ್ಟು ಎಂಬಲ್ಲಿ ರಾಧಾ ಮರಕಾಲ್ತಿಯವರು ಕೇವಲ 12 ಮೀಟರ್ ಅಂತರದಲ್ಲಿ ಕಟ್ಟಡ ಕಟ್ಟುತ್ತಿದ್ದು, ಕಟ್ಟಡ ಕಾಮಗಾರಿ ಕೂಡಲೇ ನಿಲ್ಲಿಸುವಂತೆ ನೋಟಿಸು ಜಾರಿ ಮಾಡಿ ಕಾಮಗಾರಿ ನಿಲ್ಲಿಸಿರುತ್ತಾರೆ. ಶ್ರೀ ವೀರ ಶೇಖರ್ ರವರಾದ 1ನೇ ಎದುರುದಾರರು ಲಂಚ ಪಡೆದು ದಿನಾಂಕ: 18/07/2017 ರಂದು ಸಾಮಾನ್ಯ ಸಭೆಯಲ್ಲಿ ರಾಧಾ

ಮರಕಾಲ್ತಿಯವರಿಗೆ ಆಕ್ಷೇಪ ಇದ್ದರೂ ಭೂ-ಪರಿವರ್ತನೆಗಾಗಿ ನಿರಾಪೇಕ್ಷಣಾ ಪತ್ರವನ್ನು ನಿಯಮ ಬಾಹಿರವಾಗಿ ನೀಡಿರುತ್ತಾರೆ. ಬೇಳೂರು ಗ್ರಾಮ ಸರ್ವೆ ನಂ. 270/17 ವಿಸ್ತೀರ್ಣದ 10 ಸೆಂಟ್ಸ್ ಸ್ಥಳದ ವಾಸ್ತವ್ಯ ಉದ್ದೇಶಕ್ಕೆ ಭೂ-ಪರಿವರ್ತನೆ ನಿರಾಪೇಕ್ಷಣಾ ಪತ್ರ ನೀಡಿರುತ್ತಾರೆ.

(ಇ) ಭೂ-ಪರಿವರ್ತನೆಯ ಬಗ್ಗೆ ಆಕ್ಷೇಪ ಇದ್ದರೂ ಕಂದಾಯ ನಿರೀಕ್ಷಕರಾದ ನರಸಿಂಹ ಕಾಮತ್‌ರು ರಸ್ತೆ ಮಾರ್ಜಿನ್ ಬಗ್ಗೆ ಸ್ಥಳ ಪರಿಶೀಲನೆ ಮಾಡದೇ ತಮ್ಮ ಕಛೇರಿಯಲ್ಲಿಯೇ ಕುಳಿತು ಕಡತಗಳನ್ನು ಸರಿಯಾಗಿ ಪರಿಶೀಲಿಸದೇ ನಿಯಮ ಬಾಹಿರವಾಗಿ ಭೂ-ಪರಿವರ್ತನೆಗಾಗಿ ತಹಶೀಲ್ದಾರರಿಗೆ ಶಿಫಾರಸ್ಸು ಮಾಡಿರುತ್ತಾರೆ. ಈ ಬಗ್ಗೆ ಆಕ್ಷೇಪ ಮಾಡಿದರೂ ಕುಂದಾಪುರ ತಹಶೀಲ್ದಾರರು ಭೂ-ಪರಿವರ್ತನೆಯ ಕಡತವನ್ನು ತಿರಸ್ಕರಿಸದೇ ಶಿಫಾರಸ್ಸು ಮಾಡುತ್ತಿರುವುದನ್ನು ಖಂಡಿಸಿರುತ್ತಾರೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮಕ್ಕಾಗಿ ಕೋರಿರುತ್ತಾರೆ.

3. <u>1ನೇ ಎದುರುದಾರರಾದ ಶ್ರೀ.ವೀರಶೇಖರ್‌ರವರು ಸಲ್ಲಿಸಿರುವ ಆಕ್ಷೇಪಣೆಗಳು:</u>

ರಾಧಾ ಮರಕಾಲ್ತಿ ಇವರು ಸಲ್ಲಿಸಿರುವ ಪಹಣಿ ಪತ್ರದಲ್ಲಿ ಲೋಕೋಪಯೋಗಿ ರಸ್ತೆಯ ಬಗ್ಗೆ ವಿವರಗಳು ಇಲ್ಲದೆ ಇರುವುದರಿಂದ ಭೂ ಪರಿವರ್ತನೆಯ ವಿಚಾರ ಯಾವುದೇ ಸಾರ್ವಜನಿಕ ಆಕ್ಷೇಪಣೆಗಳು ಸಮರ್ಪಕ ದಾಖಲೆಗಳೊಂದಿಗೆ ಸಲ್ಲಿಕೆಯಾಗದೆ ಇರುವುದರಿಂದ ನಿರಾಕ್ಷೇಪಣಾ ಪತ್ರ ನೀಡಲಾಗಿರುತ್ತದೆ. ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 95 ರಡಿಯಲ್ಲಿ ಭೂ ಪರಿವರ್ತನೆಗೆ ಸಂಬಂಧಿಸಿದ ಸ್ಥಳ ಪರಿಶೀಲನೆಯನ್ನು ನಡೆಸಿ ವರದಿ ನೀಡುವುದು ಕಂದಾಯ ಇಲಾಖೆಗೆ ಸಂಬಂಧಿಸಿರುತ್ತದೆ ಎಂದು ನಮೂದಿಸಿರುತ್ತಾರೆ.

4. <u>2ನೇ ಎದುರುದಾರರಾದ ಶ್ರೀ.ನರಸಿಂಹ ಕಾಮತ್‌ರವರು ಆಕ್ಷೇಪಣೆಗಳು:</u>

ಶ್ರೀಮತಿ ರಾಧ ಮರಕಾಲ್ತಿ ರವರು ಬೇಳೂರು ಗ್ರಾಮದ ಸರ್ವೆ ನಂ. 270/17 ರಲ್ಲಿ 0.16 ಎಕರೆ ಜಮೀನಿನ ಬಾಬ್ತು 0.10 ಎಕರೆ ಜಮೀನಿನ ವಾಸ್ತವ್ಯ ಉದ್ದೇಶಕ್ಕಾಗಿ

ಭೂ ಪರಿವರ್ತನೆ ಕೋರಿ ತಾಲ್ಲೂಕು ಭೂಮಾಪಕರು ತಯಾರಿಸಿದ ನಕ್ಷೆ ಹಾಗೂ ದಾಖಲೆಗಳೊಂದಿಗೆ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಗ್ರಾಮಕರಣಿಕರು ಬೇಳೂರು ರವರು ದಿನಾಂಕ: 08/06/2017 ರಂದು ವರದಿ ಸಲ್ಲಿಸಿದ್ದು, ಅದರಂತೆ ತಾವು ಸ್ಥಳ ಪರಿಶೀಲನೆ ನಡೆಸಿದ ಸಮಯದಲ್ಲಿ ಸ್ವಂತ ವಾಸ್ತವ್ಯ ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಕೋರಿದ ಜಮೀನು ಮೂಲ್ಕಿ ಹಕ್ಕಿನ ಎನ್.ಸಿ.ಆರ್: 1588/96 ರಂತೆ ಅಕ್ರಮ ಸಕ್ರಮದಡಿ ಪಡೆದುಕೊಂಡದ್ದಾಗಿದ್ದು, ಸದರಿ ಸ್ಥಳದಲ್ಲಿ 30 * 35 = 1050 ಚದರ ಅಡಿಯ ಕಟ್ಟಡ ನಿರ್ಮಾಣ ಹಂತದಲ್ಲಿರುವುದಾಗಿ, ಲೋಕೋಪಯೋಗಿ ಇಲಾಖೆ ರಸ್ತೆಯಿಂದ 14 ಮೀ. ದೂರದಲ್ಲಿರುವುದಾಗಿ ಈ ಕಛೇರಿ ಐ.ಆರ್. ಸಂಖ್ಯೆ; 960/2017-18, ದಿನಾಂಕ: 16/07/2017 ರಂದು ವಿವರವಾದ ವರದಿಯೊಂದಿಗೆ ತಾಲ್ಲೂಕು ಕಛೇರಿ ಕುಂದಾಪುರಕ್ಕೆ ಸಲ್ಲಿಸಲಾಗಿರುತ್ತದೆ. ತದನಂತರ ಸದರಿ ಪ್ರಸ್ತಾವನೆಯ ಬಗ್ಗೆ ದೂರುದಾರರು ಪರಿವರ್ತನೆ ಮಾಡಬಾರದಾಗಿ ಆಕ್ಷೇಪಿತವಾಗಿ ದಿನಾಂಕ: 19/07/2018 ರಂದು ಸಲ್ಲಿಸಿದ ಅರ್ಜಿಯೂ ತಾಲ್ಲೂಕು ಕಛೇರಿಯಲ್ಲಿ ಸ್ವೀಕೃತವಾಗಿರುತ್ತದೆ. ದಿನಾಂಕ: 20/12/2017 ರಂದು ವಿಚಾರಣೆಗೆ ಹಾಜರಾಗಲು ನೋಟಿಸು ನೀಡಲಾಗಿರುತ್ತದೆ ಹಾಗೂ ಹಾಲಿ ತಾಲ್ಲೂಕು ಕಛೇರಿಯಲ್ಲಿ ವಿಚಾರಣಾ ಹಂತದಲ್ಲಿದೆ ಹೊರತು ಭೂಪರಿವರ್ತನೆ ಆದೇಶವನ್ನು ನೀಡಿರುವುದಿಲ್ಲ ಎಂದು ನಮೂದಿಸಿರುತ್ತಾರೆ.

5. <u>3ನೇ ಎದುರುದಾರರಾದ ಶ್ರೀ.ಹೆಚ್.ಕೆ.ತಿಪ್ಪೇಸ್ವಾಮಿರವರು ಸಲ್ಲಿಸಿರುವ ಆಕ್ಷೇಪಣೆ</u>:- ತಾವು ಕುಂದಾಪುರ ತಾಲ್ಲೂಕು ತಹಶೀಲ್ದಾರರಾಗಿ ದಿನಾಂಕ: 01/08/2018 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಶ್ರೀಮತಿ ರಾಧಾ ಮರಕಾಲ್ತಿ ಇವರು ಬೇಳೂರು ಗ್ರಾಮದ ಸರ್ವೆ ನಂ. 270/17 ರಲ್ಲಿ 0.16 ಎಕರೆ ವಿಸ್ತೀರ್ಣದಲ್ಲಿ 0.10 ಎಕರೆ ವಿಸ್ತೀರ್ಣದಲ್ಲಿ ವಾಸದ ಮನೆ ನಿರ್ಮಾಣಕ್ಕಾಗಿ ದಿನಾಂಕ: 18/07/2017 ರಂದು ಅರ್ಜಿ ಸಲ್ಲಿಸಿರುವ ಅನುಸಾರ, ಈ ಬಗ್ಗೆ ಕಂದಾಯ ನಿರೀಕ್ಷಕರು ವರದಿ ಸಲ್ಲಿಸಿ ಸದರಿ ಸ್ಥಳದಲ್ಲಿ 35 * 35 ಚದರ ಅಡಿಯ ಕಟ್ಟಡ ನಿರ್ಮಾಣ ಹಂತದಲ್ಲಿದೆ, ದಂಡನೆ ವಿಧಿಸಬಹುದೆಂತಲೂ

ಹಾಗೂ ಲೋಕೋಪಯೋಗಿ ರಸ್ತೆಯಿಂದ ಕೇವಲ 14 ಮೀಟರ್ ಅಂತರದಲ್ಲಿದೆ ಎಂಬುದಾಗಿ ತಿಳಿಸಿರುತ್ತಾರೆ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕುಂದಾಪುರ ಉಪ ವಿಭಾಗ ಇವರು ಶ್ರೀಮತಿ ರಾಧಾ ಮರಕಾಲ್ತಿ ಇವರಿಗೆ ನಿರ್ಮಿಸುತ್ತಿರುವ ಕಟ್ಟಡವು ಲೋಕೋಪಯೋಗಿ ರಸ್ತೆ ಮಧ್ಯದಿಂದ 12 ಮೀಟರ್ ಅಂತರದಲ್ಲಿ ಬರುವುದರಿಂದ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಪತ್ರ ಬರೆದು ಸೂಚಿಸಿರುತ್ತಾರೆ. ರಾಧ ಮರಕಾಲ್ತಿ ಇವರಿಗೆ ಭೂಪರಿವರ್ತನೆ ಆದೇಶವನ್ನು ತಡೆಹಿಡಿಯಲಾಗಿದೆ ಎಂದು ನಮೂದಿಸಿರುತ್ತಾರೆ.

6. ಶ್ರೀಮತಿ. ರಾಧ ಮರಕಾಲ್ತಿ, ಕಟ್ಟಡದ ಸ್ವಾಧೀನದಾರರು ದೂರಿನ ಆರೋಪಗಳ ಬಗ್ಗೆ ಅಗತ್ಯವಿರುವ ದಾಖಲೆಗಳು ಮತ್ತು ಮಾಹಿತಿಯನ್ನು ಸಲ್ಲಿಸಿದ್ದು ಪರಿಶೀಲಿಸಲಾಗಿರುತ್ತದೆ. ತಮ್ಮ ಪತ್ರದಲ್ಲಿ, ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು, ಬೇಳೂರು ಗ್ರಾಮದ ಸರಕಾರಿ ಸ್ಥಳ ಸರ್ವೆ ನಂ. 270 ರ ಅಂಶದಲ್ಲಿನ ಸ್ವಲ್ಪ ಸ್ಥಳವನ್ನು ಸ್ವಾಧೀನಹೊಂದಿ ವಾಸ್ತವ್ಯದ ಗುಡಿಸಲು, ವ್ಯಾಪಾರದ ಅಂಗಡಿ, ಕೃಷಿ ಅಭಿವೃದ್ಧಿ ಕಾರ್ಯ ಮಾಡಿರುವುದಾಗಿ ನಮೂದಿಸಿರುತ್ತಾರೆ. ಸದರಿ ಕಟ್ಟಡದ ಪೂರ್ವ-ಪಶ್ಚಿಮವಾಗಿ ಒಂದು ಮಣ್ಣು ರಸ್ತೆ ಇದ್ದು ಕಾಲಾನುಭವದಲ್ಲಿ ಜಿಲ್ಲಾಪಂಚಾಯತ್ ರಸ್ತೆಯಾಗಿ ಹಾಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ವಹಣೆಗೊಳ್ಳುವ ಸುಮಾರು 20 ಅಡಿ ಅಗಲದ ವಿಸ್ತಾರವಾದ ರಸ್ತೆ ಇರುತ್ತದೆ.

ಸದರಿಯವರು ಸ್ವಾಧೀನಾನುಭವ ಹೊಂದಿರುವ ಸ್ಥಳವನ್ನು ಸಕ್ರಮಿಸಿಕೊಡುವಂತೆ ಅರ್ಜಿ ಸಲ್ಲಿಸಿದ್ದು ದಿನಾಂಕ: 12/06/1997 ರಂದು ವಿಸ್ತೀರ್ಣ 0.16 ಎಕರೆ ಸ್ಥಳವನ್ನು ಸರ್ಕಾರವು ಮಂಜೂರು ಮಾಡಿದ್ದು, ಸ್ಥಳದ ಹಕ್ಕು ಪತ್ರ, ಪಹಣಿ ಮತ್ತು ನಕ್ಷೆ ಅವರ ಹೆಸರಿನಲ್ಲಿ ಇರುವುದಾಗಿ ನಮೂದಿಸಿರುತ್ತಾರೆ.

2003-04ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯಿಂದ ವಸತಿ ಯೋಜನೆಯಡಿ ಮನೆ ಮಂಜೂರಾದ ಮೇರೆಗೆ, ಆ ಸಹಾಯ ಧನವನ್ನು ಪಡೆದು

ಪಂಚಾಯತ್ ಪರವಾನಗಿ ಸಂಖ್ಯೆ: 5/2003-04 ರಂತೆ ಸದ್ರಿ ಸ್ಥಳದಲ್ಲಿರುವ ಮನೆ/ಅಂಗಡಿ ಕಟ್ಟಡವನ್ನು ಪುನಃ ರಚಿಸಿಕೊಂಡಿರುತ್ತಾರೆ. ಮೂರು ವರ್ಷಗಳ ಹಿಂದೆ ಬಸವ ವಸತಿ ಯೋಜನೆಯಲ್ಲಿ ಮಂಜೂರಾದ ವಾಸ್ತವ್ಯದ ಮನೆ ಕಟ್ಟಡ ಅನುದಾನ ಪಡೆದು, ಪಂಚಾಯತ್ ಪರವಾನಗಿ ಸಂಖ್ಯೆ: 20/2017-18 ರಂತೆ ಸದ್ರಿ ಸ್ಥಳದಲ್ಲಿದ್ದ ಕಟ್ಟಡವನ್ನು ತೆಗೆದು ಹೊಸದಾಗಿ ಆರ್.ಸಿ.ಸಿ. ಛಾವಣಿಯ ಮನೆ ಕಟ್ಟಡವನ್ನು ನಿರ್ಮಿಸಿಕೊಂಡಿರುತ್ತಾರೆ. ಮನೆ ಕಟ್ಟಡಕ್ಕೆ 02/01/2001 ರಂದು ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ. ಮನೆ ನಂ. 2/145 ಆಗಿದ್ದು ಸದರಿ ಸ್ಥಳದ ಭೂ-ಪರಿವರ್ತನೆ ಮಾಡಿಸಿಕೊಂಡಿರುವುದಿಲ್ಲ.

7. ತನಿಖಾ ಅವಧಿಯಲ್ಲಿ ಸಂಗ್ರಹಿಸಲಾದ ದಾಖಲೆಗಳನ್ನು ಪರಿಶೀಲಿಸಲಾಗಿ, ಈ ಕೆಳಕಂಡ ಅಂಶಗಳು ಕಂಡುಬರುತ್ತವೆ.

i. ಕುಂದಾಪುರ ತಾಲ್ಲೂಕು ಬೇಳೂರು ಗ್ರಾಮದ ಸರ್ವೆ ನಂ. 270/17 ರಲ್ಲಿರುವ 0.16 ಸೆಂಟ್ಸ್ ಜಮೀನನ್ನು ಶ್ರೀಮತಿ ರಾಧಾ ಮರಕಾಲ್ತಿ ಇವರಿಗೆ ಅಕ್ರಮ ಸಕ್ರಮದಡಿ 1997-98ನೇ ಸಾಲಿನಲ್ಲಿ ಮಂಜೂರಾಗಿರುತ್ತದೆ. ಸದರಿ ಸ್ಥಳವು ಹುಣ್ಸೆಮಕ್ಕೆ-ಬೇಳೂರು ಪಿ.ಡಬ್ಲ್ಯೂ.ಡಿ. ರಸ್ತೆ ಮಾರ್ಜಿನ್‌ಗೆ ಹೊಂದಿಕೊಂಡಿರುತ್ತದೆ.

ii. ದಿನಾಂಕ: 12/06/1997ರಂದು ಕುಂದಾಪುರ ತಾಲ್ಲೂಕಿನ ತಹಶೀಲ್ದಾರರು ಸಾಗುವಳಿ ಚೀಟಿಯನ್ನು ಕೊಡುವ ಬಗ್ಗೆ ಪ್ರಮಾಣ ಪತ್ರ ನೀಡಿದ್ದು ಸದರಿ ಪ್ರಮಾಣ ಪತ್ರದಲ್ಲಿ ಕುಂದಾಪುರ ತಾಲ್ಲೂಕಿನ ಬೇಳೂರು ಗ್ರಾಮದ ಸರ್ವೆ ನಂ. 270/17 ರಲ್ಲಿ ವಿಸ್ತೀರ್ಣ 0.16 ಎಕರೆ ಅಧಿಬೋಗದಲ್ಲಿರುವ ಸರ್ಕಾರಿ ಭೂಮಿಯನ್ನು ಸಾಗುವಳಿಗಾಗಿ ವಿಲೆ ಮಾಡುವುದಕ್ಕೆ ಮತ್ತು ಅಧಿಭೋಗದ ಹಕ್ಕುಗಳನ್ನು ಕೊಡುವುದಕ್ಕೆ ಸದರಿ ಸರ್ಕಾರಿ ಭೂಮಿಯನ್ನು ಶ್ರೀಮತಿ ರಾಧ ಮರಕಾಲ್ತಿ ರವರಿಗೆ ಬಹಿರಂಗ ಹರಾಜಿನಲ್ಲಿ/ನಿಗಧಿತ ಬೆಲೆಗೆ ಕೊಂಡುಕೊಂಡಿರುತ್ತಾರೆಂದು ನಮೂದಿಸಿ ಕೆಲವು ನಿಬಂಧನೆಗಳನ್ನು

ವಿಧಿಸಿರುತ್ತಾರೆ. ಸದರಿ ಸ್ಥಳವನ್ನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದನ್ನು ಬಿಟ್ಟು ಬೇರೆ ಉದ್ದೇಶಕ್ಕೆ ಉಪಯೋಗಿಸಿದಲ್ಲಿ ಮಂಜೂರಾತಿಯನ್ನು ರದ್ದು ಪಡಿಸಿ ಸರ್ಕಾರದ ಸ್ವಾಧೀನ ಪಡೆಯಲಾಗುವುದು ಎಂದು ಷರತ್ತು ವಿಧಿಸಿರುತ್ತಾರೆ.

iii. ಸದರಿ ಸರ್ವೆ ನಂ. 270/17 ರಲ್ಲಿರುವ 0.16 ಸೆಂಟ್ಸ್ ಸ್ಥಳದಲ್ಲಿ 2014-15ನೇ ಸಾಲಿನ ಬಸವ ವಸತಿ ಯೋಜನೆಯಲ್ಲಿ ಮಂಜೂರಾದ ವಾಸ್ತವ್ಯ ಕಟ್ಟಡ ನಿರ್ಮಾಣ ಮಾಡಲು ಷರತ್ತುಗಳನ್ನು ವಿಧಿಸಿ ದಿನಾಂಕ: 23/01/2018 ರಿಂದ 22/01/2021 ರ ಅವಧಿಯಲ್ಲಿ ನಿರ್ಮಿಸಲು ಪಂಚಾಯತ್ ಪರವಾನಗಿ ನೀಡಿದ್ದು ಸದರಿ ಪರವಾನಗಿಯಲ್ಲಿ 1ನೇ ಎದುರುದಾರರ ಸಹಿ ಇರುತ್ತದೆ.

iv. ಸದರಿ ಜಮೀನು ಭೂ ಸ್ವಾಧೀನವಾಗಿರುವುದಿಲ್ಲವೆಂದು ಶ್ರೀಮತಿ ರಾಧ ಮರಕಾಲ್ತಿರವರು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ. ಶ್ರೀಮತಿ ರಾಧಾ ಮರಕಾಲ್ತಿರವರು ಸದರಿ ಸ್ಥಳದಲ್ಲಿ ಅಕ್ರಮ ಕಟ್ಟಡ ಕಟ್ಟುತ್ತಿದ್ದುದನ್ನು ಪರಿಗಣಿಸಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ನಂ. 2, ಉಪವಿಭಾಗ, ಕುಂದಾಪುರ ಇವರು ದಿನಾಂಕ: 16/01/2016 ರಂದು ನೋಟೀಸು ನೀಡಿ ಹುಣ್ಸೆಮಕ್ಕಿ ಬೇಳೂರು ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ರಸ್ತೆ ಮಧ್ಯೆ ರೇಖೆಯಿಂದ 25 ಮೀಟರ್ ಅಂತರ ಬಿಟ್ಟು ಕಟ್ಟಡ ನಿರ್ಮಿಸಬೇಕಿದ್ದು 12 ಮೀಟರ್ ಅಂತರದಲ್ಲಿ ಕಟ್ಟಡ ಕಟ್ಟುತ್ತಿದ್ದು ಸ್ಥಗಿತಗೊಳಿಸುವಂತೆ ತಿಳಿಸಿರುತ್ತಾರೆ.

v. ಸದರಿ ಕಟ್ಟಡ ನಿರ್ಮಾಣ ಕಾಮಗಾರಿಯ ಅವಶ್ಯಕತೆಗಾಗಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯಲು ಪಂಚಾಯ್ತಿಯಿಂದ ದಿನಾಂಕ: 14/02/2018 ರಂದು ನಿರಾಕ್ಷೇಪಣಾ ಪತ್ರ ನೀಡಿದ್ದು ಸದರಿ ದಾಖಲೆಗೆ 1ನೇ ಎದುರುದಾರರ ಸಹಿ ಇರುತ್ತದೆ.

vi. ಸದರಿ ಸ್ಥಳದಲ್ಲಿರುವ ವಾಣಿಜ್ಯ ಕಟ್ಟಡ ನಂ. 2-225 ರಲ್ಲಿ 2018-19 ನೇ ಸಾಲಿಗೆ ಸಂಬಂಧಪಟ್ಟಂತೆ ಉದ್ಯಮ ಮತ್ತು ವ್ಯಾಪಾರ ನಡೆಸಲು

ಪಂಚಾಯ್ತಿಯಿಂದ ಪರವಾನಗಿ ನೀಡಿದ್ದು ಸದರಿ ದಾಖಲೆಗೆ 1ನೇ ಎದುರುದಾರರ ಸಹಿ ಇರುತ್ತದೆ.

vii. ಸರ್ವೆ ನಂ. 270/17 ಜಮೀನು ಸಾಗುವಳಿಗಾಗಿ ರಾಧಾ ಮರಕಾಲ್ತಿರವರಿಗೆ ಮಂಜೂರು ಮಾಡಿದ್ದು ಯಾವುದೇ ಭೂ ಪರಿವರ್ತನಾದೇಶ ಇಲ್ಲದಿದ್ದರೂ ಕಟ್ಟಡ ರಚನೆ ಮಾಡಲು ಪರವಾನಗಿ ನೀಡಿ, ವಿದ್ಯುತ್ ಸಂಪರ್ಕ ಪಡೆಯಲು ನಿರಾಕ್ಷೇಪಣ ಪತ್ರ ನೀಡಿ, ಕಟ್ಟಡದಲ್ಲಿ ವಾಣಿಜ್ಯ ಉದ್ಯೋಗ ನಡೆಸಲು ಪರವಾನಗಿಯನ್ನು 1ನೇ ಎದುರುದಾರರು ನಿಯಮ ಬಾಹಿರವಾಗಿ ನೀಡಿ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

viii. ಸಾಗುವಳಿ ಚೀಟಿಯಲ್ಲಿ ವಿಧಿಸಿರುವ ನಿಬಂಧನೆಯಂತೆ ಜಮೀನನ್ನು ಸಾಗುವಳಿ ಮಾಡಲು ಮಾತ್ರ ಮಂಜೂರು ಮಾಡಿದ್ದು ಸದರಿ ಸ್ಥಳದಲ್ಲಿ ಕಟ್ಟಡ ಕಟ್ಟಲು ಪರವಾನಗಿಯನ್ನು 23/01/2018 ರಿಂದ 22/01/2021 ರ ಅವಧಿಗೆ ನೀಡಿದ್ದು ಸಾಗುವಳಿ ಜಮೀನಿನಲ್ಲಿ ಷರತ್ತು ಉಲ್ಲಂಘಿಸಿ ಕಟ್ಟಡ ಕಟ್ಟಿದ್ದರೂ ಕುಂದಾಪುರ ತಾಲ್ಲೂಕು ಕಛೇರಿಯಲ್ಲಿ ದಿನಾಂಕ: 01/08/2018 ರಿಂದ ಕರ್ತವ್ಯ ನಿರ್ವಹಿಸುತ್ತಿರುವ ತಹಶೀಲ್ದಾರರಾದ ಹೆಚ್.ಕೆ. ತಿಪ್ಪೇಸ್ವಾಮಿ ರವರು ಅಗತ್ಯ ಕ್ರಮ ಜರುಗಿಸದೆ ಮಂಜೂರಾತಿ ಉದ್ದೇಶ ಉಲ್ಲಂಘಿಸಿದ್ದರೂ ಮಂಜೂರಾತಿ ರದ್ದು ಪಡಿಸದೆ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

8. ಮೇಲ್ಕಂಡ ಸಂಗತಿಗಳ ಹಿನ್ನಲೆಯಲ್ಲಿ ಸರ್ವೆ ನಂ. 270/17 ಜಮೀನು ಸಾಗುವಳಿಗಾಗಿ ರಾಧಾ ಮರಕಾಲ್ತಿರವರಿಗೆ ಮಂಜೂರು ಮಾಡಿದ್ದು ಯಾವುದೇ ಭೂ ಪರಿವರ್ತನಾದೇಶ ಇಲ್ಲದಿದ್ದರೂ ಕಟ್ಟಡ ರಚನೆ ಮಾಡಲು ಪರವಾನಗಿ ನೀಡಿ, ವಿದ್ಯುತ್ ಸಂಪರ್ಕ ಪಡೆಯಲು ನಿರಾಕ್ಷೇಪಣ ಪತ್ರ ನೀಡಿ, ಕಟ್ಟಡದಲ್ಲಿ ವಾಣಿಜ್ಯ ಉದ್ಯೋಗ ನಡೆಸಲು ಪರವಾನಗಿಯನ್ನು 1ನೇ ಎದುರುದಾರರಾದ ಶ್ರೀ. ವೀರಶೇಖರ್, ಪಿಡಿಓ ರವರು ನಿಯಮ ಬಾಹಿರವಾಗಿ ನೀಡಿ ಕರ್ತವ್ಯ

ಲೋಪ ಎಸಗಿರುವುದು ಕಂಡುಬಂದಿರುತ್ತದೆ ಮತ್ತು ಸಾಗುವಳಿ ಚೀಟಿಯಲ್ಲಿ ವಿಧಿಸಿರುವ ನಿಬಂಧನೆಯಂತೆ ಜಮೀನನ್ನು ಸಾಗುವಳಿ ಮಾಡಲು ಮಾತ್ರ ಮಂಜೂರು ಮಾಡಿದ್ದು ಸದರಿ ಸ್ಥಳದಲ್ಲಿ ಕಟ್ಟಡ ಕಟ್ಟಲು ಪರವಾನಗಿಯನ್ನು 23/01/2018 ರಿಂದ 22/01/2021 ರ ಅವಧಿಗೆ ನೀಡಿದ್ದು ಸಾಗುವಳಿ ಜಮೀನಿನಲ್ಲಿ ಷರತ್ತು ಉಲ್ಲಂಘಿಸಿ ಕಟ್ಟಡ ಕಟ್ಟಿದ್ದರೂ ಕುಂದಾಪುರ ತಾಲ್ಲೂಕು ಕಛೇರಿಯಲ್ಲಿ ದಿನಾಂಕ: 01/08/2018 ರಿಂದ ಕರ್ತವ್ಯ ನಿರ್ವಹಿಸುತ್ತಿರುವ ತಹಶೀಲ್ದಾರರಾದ ಹೆಚ್.ಕೆ. ತಿಪ್ಪೇಸ್ವಾಮಿ ರವರು ಅಗತ್ಯ ಕ್ರಮ ಜರುಗಿಸದೆ ಮಂಜೂರಾತಿ ಉದ್ದೇಶ ಉಲ್ಲಂಘಿಸಿದ್ದರೂ ಮಂಜೂರಾತಿ ರದ್ದು ಪಡಿಸದೆ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

9. ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ **1ನೇ ಎದುರುದಾರರಾದ** ಶ್ರೀ. ವೀರಶೇಖರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇಲೂರು ಗ್ರಾಮ ಪಂಚಾಯತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಮತ್ತು **3ನೇ ಎದುರುದಾರರಾದ** ಶ್ರೀ. ಹೆಚ್.ಕೆ. ತಿಪ್ಪೇಸ್ವಾಮಿ, ತಹಶೀಲ್ದಾರ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ

ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

19-8-20

**[ನ್ಯಾಯಮೂರ್ತಿ ಬಿ.ಎಸ್. ಪಾಟೀಲ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**